# ಪರಲೋಕ ರಾಜ್ಯದ ಬೀಜವನ್ನು ಬಿತ್ತುವದು

# (13:1-23)

ಬಿತ್ತುವವನ ಈ ಸಾಮ್ಯವು ಯೇಸುವಿನ ಸೇವೆಯಲ್ಲಿ ನಿಖರವಾದ ತಿರುವನ್ನು ತಂದಿತು.

## ಸಾಮ್ಯ - ಅದರ ತಾತ್ಪರ್ಯ (13:1-9)

**1ಆ ದಿವಸದಲ್ಲಿ ಯೇಸು ಮನೆಯಿಂದ ಹೊರಟು 2ಸಮುದ್ರದ ದಡದಲ್ಲಿ ಕೂತುಕೊಂಡನು.
ಬಹಳ ಜನರು ಆತನ ಬಳಿಗೆ ಕೂಡಿಬಂದದರಿಂದ ಆತನು ದೋಣಿಹತ್ತಿ ಕೂತುಕೊಂಡನು.
ಆ ಜನರೆಲ್ಲರು ದಡದಲ್ಲಿ ನಿಂತಿದ್ದರು. 3ಆಗ ಆತನು ಅವರಿಗೆ ಸಾಮ್ಯರೂಪವಾಗಿ ಅನೇಕ
ಸಂಗತಿಗಳನ್ನು ಹೇಳಿದನು. ಹೇಗಂದರೆ - 4ಕೇಳಿರಿ! ಬಿತ್ತುವವನು ಬಿತ್ತುವದಕ್ಕೆ ಹೊರಟನು.
ಅವನು ಬಿತ್ತುವಾಗ ಕೆಲವು ಬೀಜ ದಾರಿಯ ಮಗ್ಗುಲಲ್ಲಿ ಬಿದ್ದವು; ಹಕ್ಕಿಗಳು ಬಂದು ಅವುಗಳನ್ನು
ತಿಂದು ಬಿಟ್ಟವು. 5ಕೆಲವು ಬೀಜ ಬಹಳ ಮಣ್ಣಿಲ್ಲದ ಬಂಡೆಯ ನೆಲದಲ್ಲಿ ಬಿದ್ದವು; ಅಲ್ಲಿ ಮಣ್ಣು
ತೆಳ್ಳಗಿದ್ದದರಿಂದ ಅವು ಬೇಗ ಮೊಳೆತವು; 6ಆದರೆ ಬಿಸಿಲೇರಿದಾಗ ಬಾಡಿ ಬೇರಿಲ್ಲದ ಕಾರಣ
ಒಣಗಿ ಹೋದವು. 7ಮತ್ತೆ ಕೆಲವು ಬೀಜ ಮುಳ್ಳುಗಿಡಗಳಲ್ಲಿ ಬಿದ್ದವು; ಮುಳ್ಳುಗಿಡಗಳು ಬೆಳೆದು
ಅವುಗಳನ್ನು ಅಡಗಿಸಿಬಿಟ್ಟವು. 8ಇನ್ನು ಕೆಲವು ಒಳ್ಳೆಯ ನೆಲದಲ್ಲಿ ಬಿದ್ದು ಒಂದು ನೂರರಷ್ಟು,
ಒಂದು ಅರವತ್ತರಷ್ಟು, ಒಂದು ಮೂವತ್ತರಷ್ಟು ಫಲವನ್ನು ಕೊಟ್ಟವು. 9ಕಿವಿಯುಳ್ಳವನು
ಕೇಳಲಿ ಅಂದನು.**

**ವಚನಗಳು 1, 2.** ಈ ಪ್ರಾರಂಭದ ವಚನಗಳು ಈ ಅಧ್ಯಾಯದಲ್ಲಿ ಬರುವ ಕೆಲವು ಸಾಮ್ಯಗಳಿಗೆ ವೇದಿಕೆಯನ್ನು ಒದಗಿಸುತ್ತವೆ. **ಯೇಸು** ಕಪೆರ್ನೌಮಿನಲ್ಲಿಯ **ಮನೆಯಿಂದ** ಹೊರಟನು, ಆತನು "ಜನರ ಗುಂಪುಗಳ ಸಂಗಡ ಇನ್ನೂ ಮಾತಾಡುತ್ತಿರುವಾಗ" (12:46) **ಸಮುದ್ರದ** ದಂಡೆಗೆ ಹೋದನು. ಕಪೆರ್ನೌಮ ಗಲಿಲಾಯ ಸಮುದ್ರ ಬಲಗಡೆ ದಂಡೆಯ ಮೇಲೆ ಸ್ಥಾಪಿತವಾಗಿದೆ. ಬಹುಶಃ ಆತನು ಆ ಸಮಯದಲ್ಲಿ ಹೆಚ್ಚು ಜನರೊಂದಿಗೆ ಮಾತನಾಡಲು ಅಲ್ಲಿ ನಿಂತುಕೊಂಡಿರಬಹುದು. ಸಮುದ್ರ ದಂಡೆಯ ಮೇಲೆ ಆತನು ಇರುವಾಗ, **ದೊಡ್ಡ ಗುಂಪು ಅಲ್ಲಿ ಕೂಡಿ ಬಂದಿದ್ದರು.** ಯೇಸು ಆ ಕ್ಷೇತ್ರದ ಅನೇಕ ಪಟ್ಟಣ ಮತ್ತು ಹಳ್ಳಿಗಳಲ್ಲಿ ಉಪದೇಶ ಮಾಡಿದನು (ಲೂಕ 8:1). ಈ ಸಮಯದಲ್ಲಿ, "ಪಟ್ಟಣಪಟ್ಟಣದಿಂದ ಜನರು ಆತನ ಬಳಿಗೆ ಬರುತ್ತಿದ್ದರು" ಎಂದು ಲೂಕನು ಹೇಳುತ್ತಾನೆ (ಲೂಕ 8:4; NKJV).

ಜನರ ಒತ್ತಡ ಬಹಳವಾಗಿದ್ದರಿಂದ ಯೇಸು ಚಿಕ್ಕ **ದೋಣಿ** ಹತ್ತಿಕೊಂಡನು. ಆತನು ದಡದಿಂದ ಸ್ವಲ್ಪ ಅಂತರಕ್ಕೆ ಸರಿದ ಮೇಲೆ, ಆ ಸ್ಥಳವು ಸ್ವಾಭಾವಿಕ ರಂಗಭೂಮಿಯಂತೆ ಕಾಣುತಿತ್ತು, **ಸಮುದ್ರ ದಂಡೆಯಲ್ಲಿ ನಿಂತುಕೊಂಡು** ಎಲ್ಲರಿಗೂ ಕೇಳಲು ಬಹಳ ಅನೂಕೂಲವಾಯಿತ್ತು. ಈ ಪ್ರಸಂಗಕ್ಕಾಗಿ ಇದ್ದ ಸಾಂಪ್ರದಾಯಿಕ ಸ್ಥಳವನ್ನು "ಸಾಮ್ಯದ ಸಣ್ಣ ಕೊಲ್ಲಿ" (ಮೊನಚಾದ ಸ್ಥಳ) ಎಂದು ಕರೆಯುತ್ತಿದ್ದರು.[1] ಈ ಕೊಲ್ಲಿಯ ಮಧ್ಯದಲ್ಲಿ ನಿಂತು ಯಾರಾದರೂ ಮಾತನಾಡುವಾಗ ಹಲವು ಸಾವಿರ ಜನರು ಅದನ್ನು ಕೇಳಿಸಿಕೊಳ್ಳಬಹುದು. ಯೇಸು ಮಾತಾಡುವಾಗ ದೋಣಿಯೇ ಒಂದು ವಿಧದಲ್ಲಿ ಪೀಠವಾಗಿತ್ತು. ರಬ್ಬಿಗಳ ಸಂಪ್ರದಾಯದಂತೆ ಆತನು ಬೋಧಿಸಲು ಕುಳಿತುಕೊಂಡನು (5:1; 15:29; 24:3; 26:55).

**ವಚನ 3.** ಯೇಸು ಪ್ರಾರಂಭಿಸುತ್ತಿರುವ ಹಾಗೆ, **ಅವರಿಗೆ ಸಾಮ್ಯರೂಪವಾಗಿ ಅನೇಕ ಸಂಗತಿಗಳನ್ನು ಹೇಳಿದನು.** ಯೇಸು ಹಿಂದಿನ ಸಂದರ್ಭಗಳಲ್ಲಿ ಈ ಬೋಧನಾ ಪದ್ಧತಿಯನ್ನು ಉಪಯೋಗಿಸಿದ್ದಾಗಲೂ, ಮತ್ತಾಯನು ಪ್ರಥಮ ಬಾರಿ ಇದನ್ನು "ಸಾಮ್ಯ" ಎಂಬ ಪದದಿಂದ ಗುರಿತಿಸುತ್ತಾನೆ. ಯೇಸು ಮಂಡಿಸಿದ "ಪರಲೋಕ ರಾಜ್ಯದ ಸಾಮ್ಯಗಳಲ್ಲಿ" ಪ್ರಥಮ ಸಾಮ್ಯ **ಬಿತ್ತುವವನ** ಸಾಮ್ಯ. ಇದು ಮೂರು ಸುವಾರ್ತೆಗಳಲ್ಲಿ ಕಂಡುಬರುತ್ತದೆ (ಮತ್ತಾಯ 13; ಮಾರ್ಕ 4; ಲೂಕ 8). ಸಾಮ್ಯಗಳನ್ನು ಹೇಳುವಾಗ, ಯೇಸು ತನ್ನ ಕೇಳುಗರಿಗೆ ಪರಿಚಿತವಾಗಿರುವ ದೃಶ್ಯಗಳನ್ನು ವರ್ಣಿಸಿದನು, ವಿಶೇಷವಾಗಿ ವ್ಯವಸಾಯ ಮತ್ತು ಕುರುಬ ಇವುಗಳ ಕಲ್ಪನೆಗಳನ್ನು ವಿವರಿಸುತ್ತಿದ್ದನು.

"ಬಿತ್ತುವವನು" **ಬಿತ್ತುವದಕ್ಕೆ ಹೋದನು.** ಆತನು ತಾನು ವಾಸಿಸುವ ಪಟ್ಟಣ ಅಥವಾ ಹಳ್ಳಿಯನ್ನು ಬಿಟ್ಟು ಹೊರಟನು ಮತ್ತು ಸುತ್ತಮುತ್ತಲಿನ ಹೊಲದಲ್ಲಿ ಬೀಜವನ್ನು ಬಿತ್ತುವದಕ್ಕೆ ಹೊರಟನು. ಬಿತ್ತುವವನು ಕೆಲವೊಮ್ಮೆ ಬೆಳಗಿನ ಜಾವದಲ್ಲಿ ಹೊರಡುತ್ತಾನೆ, ಇಡೀ ದಿನ ಕೆಲಸ ಮಾಡುತ್ತಾನೆ ನಂತರ ಸಾಯಂಕಾಲ ಪಟ್ಟಣದ ಗೋಡೆಗಳ ಒಳಗೆ ಇರುವ ತನ್ನ ಮನೆಗೆ ಸುರಕ್ಷಿತತೆಗಾಗಿ ಹಿಂತಿರುಗುತ್ತಾನೆ (ನ್ಯಾಯಸ್ಥಾಪಕರು 19:16-21; ರೂತಳು 2:2, 17, 18). ಗೋಧಿಯನ್ನು ಸಾಮಾನ್ಯವಾಗಿ ನವೆಂಬರ್/ಡಿಸೆಂಬರ್‌ನಲ್ಲಿ ಬಿತ್ತುತ್ತಿದ್ದರು ಮತ್ತು ಎಪ್ರಿಲ್/ಮೇ ತಿಂಗಳಲ್ಲಿ ರಾಶಿ ಮಾಡುತ್ತಿದ್ದರು.

ವ್ಯವಸಾಯಗಾರರು ಬೀಜವನ್ನು "ಹರಡುವ" ಪದ್ಧತಿಯಲ್ಲಿ ಬಿತ್ತುತ್ತಾರೆ. ಅವರು ಬಿತ್ತುವಾಗ ಬೀಜದ ಚೀಲಗಳನ್ನು ತಮ್ಮ ಹೆಗಲಿಗೆ ನೇತು ಹಾಕಿಕೊಂಡು ಹೊಲದಲ್ಲೆಲ್ಲಾ ತಿರುಗಾಡುತ್ತಾ, ಕೈ ತುಂಬಾ ಬೀಜಗಳನ್ನು ತೆಗೆದುಕೊಂಡು ತಾವು ಹೋಗುತ್ತಿರುವ ಹಾಗೆ ಗಾಳಿಯಲ್ಲಿ ಎರಚುತ್ತಾ ತಿರುಗುತ್ತಾರೆ. ಈ ರೀತಿಯಲ್ಲಿ ಬಿತ್ತುವಾಗ, ಬೀಜವು ಎಲ್ಲಿ ಬೀಳುತ್ತದೆ ಎಂಬುದನ್ನು ತಿಳಿದುಕೊಳ್ಳುವ ಮಾರ್ಗವಿಲ್ಲ. ಸಾಕಷ್ಟು ಬೀಜಗಳು ಫಲವನ್ನು ನೀಡಲು ಫಲವತ್ತಾದ ಭೂಮಿಯಲ್ಲಿ ಬೀಳುತ್ತವೆ ಎಂಬುದು ವ್ಯವಸಾಯಗಾರನಿಗೆ ತಿಳಿದಿರುತ್ತದೆ. ಸರಿಯಾದ ಪರಿಸ್ಥಿತಿಯಲ್ಲಿ, ಅದು ಬೆಳೆದು ಆತನಿಗೆ ಉತ್ತಮವಾದ ಸುಗ್ಗಿಯನ್ನು ನೀಡುತ್ತದೆ. ಈ ಸಾಮ್ಯದಲ್ಲಿ, ಬಿತ್ತುವವನು ಮತ್ತು ಬೀಜವು ಸ್ಥಿರವಾಗಿರುತ್ತವೆ, ಆದರೆ ಭೂಮಿಯ ವಿಧಗಳು ಬೇರೆ ಬೇರೆಯಾಗಿರುತ್ತವೆ.

**ವಚನ 4.** ಯೇಸು ಮೊದಲು **ದಾರಿಯಲ್ಲಿ ಬಿದ್ದ ಬೀಜದ** ಕುರಿತಾಗಿ ಹೇಳಿದ್ದಾನೆ. "ದಾರಿ" (*hodos*) ಎಂದು ಅನುವಾದಿಸಲ್ಪಟ್ಟ ಗ್ರೀಕ್ ಪದಕ್ಕೆ "ಮಾರ್ಗ" ಎಂಬುದು ವಿಶಿಷ್ಟವಾದ ಅರ್ಥ. ಇದು "ಹೆದ್ದಾರಿ," "ರಸ್ತೆ," ಅಥವಾ "ಕಾಲು ದಾರಿ" ಯನ್ನು ಸೂಚಿಸುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿ, ಇದು "ಕಾಲು ದಾರಿ"ಯನ್ನು (NIV; NRSV) ಸೂಚಿಸುತ್ತದೆ. ಪಾಲೇಸ್ತೀನ ದೇಶದಲ್ಲಿ ದ್ರಾಕ್ಷೇ ತೋಟಗಳನ್ನು ಕಲ್ಲಿನ ಗೋಡೆ ಅಥವಾ ಕಂಟಿಗಳಿಂದ ಕಾಪಾಡಿಕೊಳ್ಳುತ್ತಿದ್ದರು (ಅರಣ್ಯಕಾಂಡ 22:24; ಜ್ಞಾನೋಕ್ತಿ 24:30, 31; ಯೆಶಾಯ 5:5), ಪೈರಿನ ಹೊಲಗಳಿಗೆ ಬೇಲಿ ಹಾಕುತ್ತಿರಲಿಲ್ಲ (12:1 ನೋಡಿರಿ). ಬದಲಾಗಿ ಅವುಗಳನ್ನು ಕಿರಿದಾದ ಕಾಲುದಾರಿಯಿಂದ ಬೇರ್ಪಡಿಸುತ್ತಿದ್ದರು, ಮತ್ತು ಅವುಗಳ ಮಿತಿಯನ್ನು ಕೆಲವೊಮ್ಮೆ ಸೀಮೆಗಲ್ಲುಗಳನ್ನು ನಿಲ್ಲಿಸಿ ಗುರುತಿಸುತ್ತಿದ್ದರು (ಧರ್ಮೋಪದೇಶಕಾಂಡ 19:14; 27:17; ಯೋಬನು 24:2; ಜ್ಞಾನೋಕ್ತಿ 22:28; 23:10). ಈ ಕಾಲುದಾರಿಗಳು ಅನೇಕ ವರ್ಷಗಳಿಂದ ತುಳಿತಕ್ಕೆ ಒಳಗಾಗಿ ಗಟ್ಟಿಯಾಗಿವೆ. ಆದುದರಿಂದ, ಅವುಗಳುದ್ದಕ್ಕೂ ಇರುವ ಭೂಮಿ ಗಟ್ಟಿಯಾಗಿರುವದರಿಂದ ಬೀಜವು ಅದನ್ನು ತೂರಿಕೊಂಡು ಒಳಗೆ ಹೋಗಲು ಆಗುವದಿಲ್ಲ. ಅಲ್ಲಿ ಬಿದ್ದಿರುವ ಬೀಜವು ಭೂಮಿಯ ಮೇಲಭಾಗದಲ್ಲಿಯೇ ಬಿದ್ದಿರುತ್ತದೆ. **ಪಕ್ಷಿಗಳಿಗೆ** ಸರಳವಾದ ಆಹಾರವಾಗುತ್ತದೆ. ಒಕ್ಕಲಿಗನು ಅದನ್ನು ರಕ್ಷಿಸಿ ಫಲವತ್ತಾದ ಭೂಮಿಯಲ್ಲಿ ಹಾಕುವ ಪೂರ್ವದಲ್ಲಿಯೇ ಅವುಗಳನ್ನು ನುಂಗಿಹಾಕುತ್ತವೆ.

**ವಚನಗಳು 5, 6.** ಎರಡನೆಯದಾಗಿ, ಕೆಲವು ಬೀಜಗಳು **ಬಂಡೆ ನೆಲದ ಮೇಲೆ ಬಿದ್ದವು** ಎಂದು ಯೇಸು ಹೇಳಿದ್ದಾನೆ. ಇದು ಹೆಚ್ಚಾಗಿ ಸಂಭವಿಸುವ ಸಾಧ್ಯತೆಯಿದೆ. ಅನೇಕ ಕ್ಷೇತ್ರ

ಗಳಲ್ಲಿ, ಕೆಲವು ಅಂಗುಲಗಳಷ್ಟು ಆಳದಲ್ಲಿ ಸುಣ್ಣದ ಕಲ್ಲುಗಳು ಇರುತ್ತವೆ. ಕ್ರಿಸ್ತನ ಸಮಯದಲ್ಲಿ ಯೋರ್ದನ ನದಿಯ ಬದಿಗೆ ಮತ್ತು ಗಲಿಲಾಯ ಸಮುದ್ರದ ಬದಿಗೆ ಇರುವ ಕೆಲವೊಂದು ಬಯಲು ಭೂಮಿ ಮತ್ತು ಸಮತಟ್ಟಾದ ಭೂಮಿಯನ್ನು ಹೊರತುಪಡಿಸಿ, ವಿಶಾಲವಾದ ಪೈರನ್ನು ಬೆಳೆಯಲು ಸಾಕಷ್ಟು ಭೂಮಿ ಸಿಕ್ಕುವದು ಕಠಿಣವಾಗಿತ್ತು.

ಮಣ್ಣು **ಅಷ್ಟೊಂದು** ಆಳವಾಗಿಲ್ಲದೇ ಇರುವದರಿಂದ, ಗಿಡಗಳು ಬೇಗನೆ ಮೊಳಕೆ ಒಡೆಯುತ್ತವೆ. ಏನೇ ಆದರೂ ಸಹ, **ಸೂರ್ಯನ** ಬಿಸಿಲು ಬರುವಾಗ ತಾಪದಿಂದ **ಒಣಗಿ ಹೋದವು.** ಇಂತಹ ಗಿಡಗಳ ಎಲೆಗಳು ಮೊದಲು ಆರೋಗ್ಯಯುತವಾಗಿ ಮತ್ತು ಬಲವಾಗಿ ಕಂಡುಬರಬಹುದು; ಆದರೆ ನೀರು ಮತ್ತು ಪೋಷಣೆಯನ್ನು ಒದಗಿಸಲು ಸರಿಯಾದ ಬೇರಿನ ವ್ಯವಸ್ಥೆಯಿಲ್ಲದೆ ಗಿಡವು ಬೇಗನೇ ಒಣಗಿ ಸತ್ತುಹೋಗುತ್ತದೆ. ಲೂಕ 8:6ರಲ್ಲಿ "ಅವು ಮೊಳೆತು ತ್ಯಾವವಿಲ್ಲದ ಕಾರಣ ಒಣಗಿ ಹೋದವು" ಎಂದು ಹೇಳುತ್ತದೆ.

**ವಚನ 7.** ಮೂರನೆಯದಾಗಿ, ಕೆಲವು ಬೀಜಗಳು **ಮುಳ್ಳುಗಿಡಗಳಲ್ಲಿ ಬಿದ್ದವು** (ಯೋಬ 31:40; ಯೆರೆಮೀಯಾ 4:3; ಮತ್ತಾಯ 7:16; ಇಬ್ರಿಯ 6:8). "ಮುಳ್ಳು" ಎನ್ನುವ ಶಬ್ದಕ್ಕೆ ಗ್ರೀಕ್ ಭಾಷೆಯಲ್ಲಿ (*akantha*) ಇದು "ಮುಳ್ಳುಗಿಡ" ಎಂದು ಸೂಚಿಸಬಹುದು. ಬೀಜವು ಸ್ವಾಭಾವಿಕವಾಗಿ ಮುಳ್ಳು ಬೆಳೆದ ಹೊಲದ ಒಂದು ಭಾಗದಲ್ಲಿ ಬೇರನ್ನು ಬಿಟ್ಟಿತು. ಮುಳ್ಳು ಗಿಡಗಳು ಅಂದು ಮತ್ತು ಇಂದು ಅತೀ ಶೀಘ್ರವಾಗಿ ಬೆಳೆಯುತ್ತವೆ. ಒಂದು ತುಂಡು ಭೂಮಿಯನ್ನು ಸ್ವಚ್ಛಗೊಳಿಸಲು ಬಹಳ ಶ್ರಮವಹಿಸಬೇಕಾಗುತ್ತದೆ; ಒಂದು ವೇಳೆ ನಿರ್ಲಕ್ಷಿಸಿದರೆ, ಅವು ಭೂಮಿಯನ್ನು ತಮ್ಮ ಅಧೀನದಲ್ಲಿ ತೆಗೆದುಕೊಳ್ಳುತ್ತವೆ (ಜ್ಞಾನೋಕ್ತಿ 24:30-34). ಹೊಲವನ್ನು ಸ್ವಚ್ಛಗೊಳಿಸಬೇಕಾದರೆ ಕೇವಲ ಕತ್ತರಿಸುವದಲ್ಲ ಮುಳ್ಳನ್ನು ಬೇರು ಸಹಿತ ಕಿತ್ತಬೇಕು. ಸಂಪೂರ್ಣವಾಗಿ ತೆಗೆಯಲು ಅವುಗಳನ್ನು ಕಡಿದರೆ ಸಾಲದು, ಅವುಗಳನ್ನು ಬೇರು ಸಹಿತ ತೆಗೆಯಬೇಕು. ಅವುಗಳು ಆಳವಾಗಿ ಕೆಳಗಡೆ ಇಳಿದಿದ್ದರೆ, ಅವುಗಳು ಪುನಃ ಬೇಗನೆ ಬೆಳೆಯುತ್ತವೆ. ಈ ಸಂದರ್ಭದಲ್ಲಿ, ಒಳ್ಳೆಯ ಬೆಳೆಗಳು ಈ ಮುಳ್ಳಿನೊಂದಿಗೆ ಬೆಳೆಯುತ್ತವೆ, ಮತ್ತು ಅಂತಿಮವಾಗಿ **ಮುಳ್ಳುಗಿಡಗಳು ... ಅವುಗಳನ್ನು ಅಡಗಿಸಿಬಿಡುತ್ತವೆ.** ಮುಳ್ಳುಗಳು ಸಾಕಷ್ಟು ಅವುಗಳಿಗೆ ಸಿಗುವ ಪೋಷಣೆ, ಸೂರ್ಯನ ಬೆಳಕು, ಮತ್ತು ಗಾಳಿ ಇವುಗಳನ್ನು ತಾನೇ ಅಪಹರಿಸಿ ತೆಗೆದುಕೊಂಡು ಬಿಡುವದರಿಂದ ಒಳ್ಳೆಯ ಗಿಡಗಳು ಬೆಳೆಯದೆ ಸತ್ತುಹೋಗುತ್ತವೆ.

**ವಚನ 8.** ನಾಲ್ಕನೆಯದಾಗಿ, ಯೇಸುವಿನ ಕಥೆಯಲ್ಲಿ ಇನ್ನು **ಒಳ್ಳೆ ನೆಲದಲ್ಲಿ ಬಿದ್ದವು ಅವುಗಳು ಒಂದು ನೂರರಷ್ಟು, ಒಂದು ಅರವತ್ತರಷ್ಟು, ಒಂದು ಮೂವತ್ತರಷ್ಟು ಫಲವನ್ನು ಕೊಟ್ಟವು.** Craig S. Keener ರವರ ಪ್ರಕಾರವಾಗಿ, ಆ ಕ್ಷೇತ್ರದಲ್ಲಿ ಸುಗ್ಗಿಯ ಕಾಲದಲ್ಲಿ ಸರಾಸರಿ ಏಳು ಮತ್ತು ಬಿತ್ತಿದ ಅರ್ಧ ಬೀಜದ ಹತ್ತು ಪಟ್ಟು ಫಲದೊರೆಯುತ್ತದೆ.[2] ಈ ಲೆಕ್ಕಾಚಾರದಿಂದ, ಕ್ರಿಸ್ತನು ಹೇಳಿದ ವಿವಿಧ ಫಲಗಳು ಅದ್ಭುತವಲ್ಲದಿದ್ದರೂ ಅಸಾಮಾನ್ಯವಾಗಿವೆ.[3] ಒಂದು ಕುಟುಂಬದ ಪಿತೃಗಳ ಕಾಲದಲ್ಲಿ ಇಸಾಕನು, ದೇವರಿಂದ ಆಶೀರ್ವದಿಸಲ್ಪಟ್ಟನು, ನೂರರಷ್ಟು ಬೆಳೆಯನ್ನು ಬೆಳೆದನು (ಆದಿಕಾಂಡ 26:12). ಮುಂದೆ ಯೆಹೂದ್ಯ ಬರಹಗಳು ಇಂತಹದ್ದೇ ಬೆಳವಣಿಗೆಯನ್ನು ಸೂಚಿಸುತ್ತವೆ.[4] ಇಲ್ಲಿ ಉಲ್ಲೇಖಿಸಿರುವ ಸಮೃದ್ಧಿಯಾದ ಫಲಗಳು ಫಲಕೊಡದೇಯಿರುವ ಭೂಮಿಯಲ್ಲಿ ಬಿದ್ದು ಹಾಳಾದ ಬೀಜಗಳಿಗೆ ಸರಿದೂಗಿಸುವದಕ್ಕಿಂತಲೂ ಹೆಚ್ಚಾದ ಫಲಗಳನ್ನು ಹೊಂದಿವೆ.

**ವಚನ 9.** ಯೇಸು **ಕಿವಿಯುಳ್ಳವನು ಕೇಳಲಿ** ಎಂದು ಹೇಳುವದರ ಮುಖಾಂತರ ಮುಕ್ತಾಯ ಮಾಡಿದ್ದಾನೆ (11:15ರ ಮೇಲಿನ ವ್ಯಾಖ್ಯಾನ ನೋಡಿರಿ). ಸಾಮ್ಯವನ್ನು ಕೇಳುತ್ತಿರುವ ಎಲ್ಲರೂ ಅದರ ಅರ್ಥವನ್ನು ಗ್ರಹಿಸಿಕೊಳ್ಳಲಿ ಎಂದು ಆತನು ಬಯಸಿದ್ದನು. ಈ ಎಚ್ಚರಿಕೆಯು ವಚನ 43ರಲ್ಲಿ ಪುನರಾವರ್ತನೆಯಾಗಿದೆ. ಯೇಸು ಈ ಸಾಮ್ಯದ ವಿವರಣೆಯನ್ನು 13:18-23ರಲ್ಲಿ ಕೊಟ್ಟಿದ್ದಾನೆ.

## ಸಾಮ್ಯ - ಅದರ ಉದ್ದೇಶ (13:10-17)

**10ತರುವಾಯ ಆತನ ಶಿಷ್ಯರು ಬಂದು - ಯಾಕೆ ಸಾಮ್ಯರೂಪವಾಗಿ ಅವರ ಸಂಗಡ
ಮಾತಾಡುತ್ತೀ ಎಂದು ಕೇಳಿದರು. 11ಅದಕ್ಕಾತನು ಅವರಿಗೆ - ಪರಲೋಕ ರಾಜ್ಯದ ಗುಟ್ಟುಗಳನ್ನು
ತಿಳಿಯುವ ವರವು ನಿಮಗೇ ಕೊಟ್ಟದೆ; ಅವರಿಗೆ ಕೊಟ್ಟಿಲ್ಲ. 12ಯಾಕೆಂದರೆ ಇದ್ದವನಿಗೆ
ಕೊಡಲ್ಪಡುವದು, ಅವನಿಗೆ ಮತ್ತೂ ಹೆಚ್ಚಾಗುವದು; ಇಲ್ಲದವನ ಕಡೆಯಿಂದ ಇದ್ದದ್ದೂ
ತೆಗೆಯಲ್ಪಡುವದು. 13ನಾನು ಅವರ ಸಂಗಡ ಸಾಮ್ಯರೂಪವಾಗಿ ಮಾತಾಡುವದಕ್ಕೆ
ಕಾರಣವೇನೆಂದರೆ ಅವರಿಗೆ ಕಣ್ಣಿದ್ದರೂ ನೋಡುವದಿಲ್ಲ, ಕಿವಿಯಿದ್ದರೂ ಕೇಳುವದಿಲ್ಲ
ಮತ್ತು ತಿಳುಕೊಳ್ಳುವದಿಲ್ಲ. 14ಯೆಶಾಯನು ಹೇಳಿದ ಪ್ರವಾದನೆಯು ಅವರಲ್ಲಿ ನೆರವೇರುತ್ತದೆ;
ಅದೇನೆಂದರೆ -**

**ನೀವು ಕಿವಿಯಿದ್ದು ಕೇಳಿದರೂ ತಿಳುಕೊಳ್ಳುವದೇ ಇಲ್ಲ;
ಕಣ್ಣಿದ್ದು ನೋಡಿದರೂ ಕಾಣುವದೇ ಇಲ್ಲ.
15ಈ ಜನರ ಹೃದಯವು ಕೊಬ್ಬಿತು:
ಇವರ ಕಿವಿ ಮಂದವಾಯಿತು;
ಇವರು ಕಣ್ಣು ಮುಚ್ಚಿಕೊಂಡಿದ್ದಾರೆ.
ತಾವು ಕಣ್ಣಿನಿಂದ ಕಂಡು
ಕಿವಿಯಿಂದ ಕೇಳಿ ಹೃದಯದಿಂದ ತಿಳಿದು
ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆ
ಯನ್ನು ಹೇಗೂ ಹೊಂದಬಾರದೆಂದು ಮಾಡಿಕೊಂಡಿದ್ದಾರೆ ಎಂಬುದು.
16ಆದರೆ ನಿಮ್ಮ ಕಣ್ಣು ಕಾಣುತ್ತವೆ, ನಿಮ್ಮ ಕಿವಿ ಕೇಳುತ್ತವೆ; ಆದದರಿಂದ ನೀವು ಧನ್ಯರು.
17ನಿಮಗೆ ಸತ್ಯವಾಗಿ ಹೇಳುತ್ತೇನೆ, ನೀವು ನೋಡುತ್ತಿರುವ ಕಾರ್ಯಗಳನ್ನು ಬಹು ಮಂದಿ
ಪ್ರವಾದಿಗಳೂ ಸತ್ಪುರುಷರೂ ನೋಡಬೇಕೆಂದು ಅಪೇಕ್ಷಿಸಿದರೂ ನೋಡಲಿಲ್ಲ; ನೀವು
ಕೇಳುತ್ತಿರುವ ಸಂಗತಿಗಳನ್ನು ಅವರು ಕೇಳಬೇಕೆಂದು ಅಪೇಕ್ಷಿಸಿದರೂ ಕೇಳಲಿಲ್ಲ.**

**ವಚನ 10.** ತರುವಾಯ **ಶಿಷ್ಯರು** ಯೇಸುವಿನ ಬಳಿಗೆ ಬಂದು, **ಯಾಕೆ ಅವರ ಸಂಗಡ ಸಾಮ್ಯರೂಪವಾಗಿ ಮಾತಾಡುತ್ತಿ?** ಎಂದು ಕೇಳಿದರು. ಶಿಷ್ಯರು ಬಹುಶಃ ಈ ಪ್ರಶ್ನೆಯನ್ನು ಆತನು ಮನೆಯಲ್ಲಿರುವಾಗ ಕೇಳಿರಬಹುದು (13:36). ಆತನ ಹಿಂಬಾಲಕರು "ಆತನು ಒಬ್ಬನೇ ಇದ್ದಾಗ" ಆತನನ್ನು ಸಾಮ್ಯದ ಕುರಿತಾಗಿ ಕೇಳಿರಬಹುದೆಂದು ಮಾರ್ಕ 4:10 ಹೇಳುತ್ತದೆ.

ಯೇಸು ಮೊದಲು ಸಹ ಸಾಮ್ಯಗಳನ್ನು ಉಪಯೋಗಿಸಿದ್ದಾನೆ, ಆದರೆ ಇಲ್ಲಿ ಆತನು ಉಪಯೋಗಿಸಿದ ಮಟ್ಟಕ್ಕೆ ಅಲ್ಲ. ಶಿಷ್ಯರು ಆತನ ಬೋಧನೆಯ ಶೈಲಿಯಲ್ಲಿರುವ ವ್ಯತ್ಯಾಸವನ್ನು ಗುರುತಿಸಿದರು ಮತ್ತು ಅವರು ಇದರ ಕುರಿತಾಗಿ ಅತ್ಯಾಶ್ಚರ್ಯಪಟ್ಟರು. ಅವರ ಪ್ರಶ್ನೆ ಯೇಸುವಿನ ಸಾಮ್ಯಗಳು ಯಾವಾಗಲೂ ಸರಳವಾಗಿರಲಿಲ್ಲ ಎಂಬುದನ್ನು ಸೂಚಿಸುತ್ತದೆ.

**ವಚನ 11. ಪರಲೋಕ ರಾಜ್ಯದ ಗುಟ್ಟುಗಳನ್ನು ತಿಳಿಯುವ ವರವು ನಿಮಗೇ ಕೊಟ್ಟಿದೆ** ಎಂದು ಕರ್ತನು ಪ್ರತ್ಯುತ್ತರಿಸಿದರು. ಪ್ರವಾದಿಯು ಬರಲಿಕ್ಕಿರುವ ದೇವರ ಶಾಶ್ವತವಾದ ರಾಜ್ಯದ ಕುರಿತು ಮುಂತಿಳಿಸುವಾಗ "ಗುಟ್ಟುಗಳು" ಮತ್ತು "ಪರಲೋಕ ರಾಜ್ಯ" ಎಂಬ ಪದಗಳು ದಾನಿಯೇಲ 2ನೇ ಅಧ್ಯಾಯದಲ್ಲಿ ಒಟ್ಟಾಗಿ ಕಂಡುಬರುತ್ತವೆ (ದಾನಿಯೇಲ 2:18, 19, 22, 23, 27, 30, 44, 47). "ಗುಟ್ಟು" (*mustērion*) ಎಂದು ಅನುವಾದಿಸಿದ ಗ್ರೀಕ್ ಶಬ್ದವು ಒಮ್ಮೆ ಮರೆಯಾಗಿಡಲ್ಪಟ್ಟ ಆದರೆ ಈಗ ತರೆದಿಟ್ಟಿದ್ದನ್ನು ತೋರಿಸುತ್ತದೆ. ಮತ್ತಷ್ಟು

ವಿಶೇಷವಾಗಿ, ಕ್ರಿಸ್ತನ ಬಲಿದಾನದ ಮೂಲಕ ಮತ್ತು ಆತನ ಸಭೆಯನ್ನು ಸ್ಥಾಪಿಸುವದರ ಮೂಲಕ (ರೋಮಾಪುರ 16:25, 26; ಎಫೆಸ 3:4-12; ಕೊಲಸ್ಸೆ 1:25-27) ಮಾನವರನ್ನು (ಯೆಹೂದ್ಯರು ಮತ್ತು ಅನ್ಯಜನರೂ ಇಬ್ಬರಿಗೂ) ರಕ್ಷಿಸಲು ದೇವರ ಮರೆಯಾದ ಯೋಜನೆಯನ್ನು ಸೂಚಿಸುತ್ತದೆ.

"ದೇವರ ರಾಜ್ಯದ ಗುಟ್ಟು" ಪ್ರಕಟಣೆಯಾಗಿರುವದು ಅದು ದೇವರ ಕೃಪೆಯ ನಿಮಿತ್ತ ಬಂದಿರುವಂಥದ್ದಾಗಿದೆ. ಏನೇ ಆದರೂ ಯಾರು ಯೇಸುವಿನ ಮಾತುಗಳನ್ನು ಕೇಳಲು ಇಷ್ಟವಿಲ್ಲವೋ ಅವರು ಅವುಗಳನ್ನು ಅರ್ಥಮಾಡಿಕೊಳ್ಳುವ ಅವಕಾಶವನ್ನು ಕಳೆದು ಕೊಳ್ಳುತ್ತಾರೆ. ಶಿಷ್ಯರು ಯೇಸುವನ್ನು ಮೆಸ್ಸೀಯನೆಂದು ನಂಬಿ ಆತನು ದೇವರ ರಾಜ್ಯವನ್ನು ಸ್ಥಾಪಿಸಲು ಬಂದನೆಂದು ನಂಬಿದರು, ಅವರು ಆತನ ಸಾಮ್ಯಗಳನ್ನು ಗ್ರಹಿಸಿಕೊಳ್ಳಲು ಸಮರ್ಥರಾಗಿದ್ದರು.

**ವಚನ 12. ಯಾಕೆಂದರೆ ಇದ್ದವನಿಗೆ ಕೊಡಲ್ಪಡುವದು, ಅವನಿಗೆ ಮತ್ತು ಹೆಚ್ಚಾಗುವದು; ಇಲ್ಲದವನ ಕಡೆಯಿಂದ ಇದ್ದದ್ದು ತೆಗೆಯಲ್ಪಡುವದು** ಎಂದು ಹೇಳಿ ತನ್ನ ಶಿಷ್ಯರನ್ನು ಧೈರ್ಯಪಡಿಸಿದರು (ನೋಡಿರಿ 25:29; ಮಾರ್ಕ 4:25; ಲೂಕ 8:18; 19:26). ಯಾರು ಕರ್ತನ ಸಾಮ್ಯಗಳ ಸಂದೇಶಗಳನ್ನು ತಿಳಿದುಕೊಳ್ಳುತ್ತಾರೋ ಅವರಿಗೆ ಇನ್ನೂ ಹೆಚ್ಚಿನ ಆತ್ಮೀಕ ಸತ್ಯಗಳನ್ನು ತಿಳಿದುಕೊಳ್ಳುವ ಜ್ಞಾನವು ಕೊಡಲ್ಪಡುವದು. ಯಾರಿಗೆ ಆತ್ಮಿಕ ಗ್ರಹಿಕೆ ಇರುವದಿಲ್ಲವೋ ಅವರು ಆತನ ಸಾಮ್ಯಗಳ ಅರ್ಥವನ್ನು ತಿಳಿದುಕೊಳ್ಳಲಾರರು. ಅವರು ಗ್ರಹಿಸಲು ಶಕ್ತರಾಗಿದ್ದರು ಆದರೆ ಅವರು ಅದನ್ನು ಆಯ್ದುಕೊಳ್ಳಲಿಲ್ಲ. ಆ ಕಾರಣದಿಂದಾಗಿ ಅವರಿಗಿರುವ ಆತ್ಮೀಕ ಜ್ಞಾನವು ಅವರಿಂದ ತೆಗೆಯಲ್ಪಡುವದು ಎಂದು ಯೇಸು ಹೇಳಿದನು.

**ವಚನಗಳು 13-15.** ಯಾರು ಆಲಿಸಲು ಸಿದ್ಧರಾಗಿಲ್ಲವೋ ಅವರಿಂದ ತನ್ನ ಸಂದೇಶ ವನ್ನು ಮುಚ್ಚಿಡುವದಕ್ಕಾಗಿ ಯೇಸು **ಸಾಮ್ಯಗಳಲ್ಲಿ** ಮಾತನಾಡಿದನು. ಅವರ ಹೃದಯಗಳನ್ನು ಆತನ ಸಂದೇಶವನ್ನು ತಿಳಿದುಕೊಳ್ಳುವಂತೆ ಕಠಿಣವಾಗಿದ್ದವು. ನಮ್ಮ ರಕ್ಷಕನು **ಯೆಶಾಯನ ಪ್ರವಾದನೆಯು** ನೇರವೇರುವಂತೆ ಸಂದೇಶಗಳನ್ನು ಕೇಳಲು ಸಿದ್ಧವಿಲ್ಲದ ಅವರ ಹೃದಯಗಳನ್ನು ನೋಡಿದನು. ಆತನು ಯೆಶಾಯ 6:9, 10ರಲ್ಲಿರುವ ವಾಕ್ಯಭಾಗಗಳನ್ನು ಉಲ್ಲೇಖಿಸಿ, ಸೆಪ್ಟಜೆಂಟಿನಲ್ಲಿರುವ ಪದಗಳನ್ನು ಉಪಯೋಗಿಸಿದ್ದಾನೆ (ನೋಡಿರಿ ಯೋಹಾನ 12:39-41; ಅಪೊಸ್ತಲರ ಕೃತ್ಯಗಳು 28:25-27).

ಅವರು ಕಿವಿಯಿದ್ದು **ಕೇಳಿದರೂ ತಿಳುಕೊಳ್ಳುವದೇ ಇಲ್ಲ**; ಕಣ್ಣಿದ್ದು **ನೋಡಿದರೂ ಕಾಣುವದೇ ಇಲ್ಲ.** ಮೂಲ ಹೇಳಿಕೆ (ಯೆಶಾಯನು ಪ್ರವಾದನೆಯ ಸನ್ನಿವೇಶದಲ್ಲಿ ಕಂಡುಬರುವ) ಯೆಶಾಯನ ದಿನಗಳಲ್ಲಿದ್ದ ಜನರನ್ನು ವರ್ಣಿಸುತ್ತದೆ, ಖಂಡಿತವಾಗಿಯೂ ಅದು ಯೇಸು ಸಂಬೋಧಿಸುತ್ತಿದ್ದ ಜನರಿಗೂ ಸಹ ಅನ್ವಯಿಸುತ್ತದೆ. ಇವರಿಗೆ ಇರುವ ಸಮಸ್ಯೆ ಏನೆಂದರೆ ಅವರು ಮೇಲಿಂದ ಮೇಲೆ ದೇವರ ವಾಕ್ಯವನ್ನು ಕೇಳಿದ್ದರು, ಆದರೆ ಅವರು ಕೇಳಲು ಪ್ರಯತ್ನಿಸಿದ್ದರೇ ಹೊರತು ಅದನ್ನು ತಿಳಿದುಕೊಳ್ಳಲು ತಮ್ಮ ಮನಸ್ಸುಗಳನ್ನು ತೆರೆಯಲಿಲ್ಲ. ಅವರು ಸತ್ಯವನ್ನು ಕೇಳದಂತೆ ತಮ್ಮ **ಕಿವಿಯನ್ನು** ಮುಚ್ಚಿಕೊಂಡರು, ಮತ್ತು ಅದರ ಅರ್ಥವನ್ನು ಗ್ರಹಿಸದಂತೆ ತಮ್ಮ **ಕಣ್ಣನ್ನು** ಮುಚ್ಚಿಕೊಂಡರು. ಅವರ ಕ್ರಾಂತಿಕಾರಿ ವರ್ತನೆ ದೇವರಿಂದ ಕ್ಷಮಾಪಣೆಯನ್ನು ಹೊಂದದಂತೆ ಅವರನ್ನು ತಡೆಯಿತು.

**ವಚನ 16.** ಇದಕ್ಕೆ ಭಿನ್ನವಾಗಿ ಜನಸಮೂಹದೊಂದಿಗೆ ಇದ್ದ ಶಿಷ್ಯರು ಆತ್ಮೀಕ ಸತ್ಯಸಂಗತಿಗಳಿಗೆ ತಮ್ಮನ್ನು ತೆರೆದಿಟ್ಟಿದ್ದರು. ಇದರ ನಿಮಿತ್ತವಾಗಿ: **ಆದರೆ ನಿಮ್ಮ ಕಣ್ಣು ಕಾಣುತ್ತವೆ, ನಿಮ್ಮ ಕಿವಿ ಕೇಳುತ್ತವೆ; ಆದದರಿಂದ ನೀವು ಧನ್ಯರು** ಎಂಬ ಆಶೀರ್ವಾದವನ್ನು ಅವರಿಗೆ ಪ್ರಕಟಿಸಿದನು. ಅವರ ಹೃದಯಗಳು ಸ್ವೀಕರಿಸುವಂತವುಗಳು ಆಗಿರುವದರಿಂದ, ಅವರು ಯೇಸು ಮಂಡಿಸಿದ ಸತ್ಯಗಳನ್ನು ಕೇಳಿದರು ಮತ್ತು ನೋಡಿದರು. ಆದಾಗ್ಯೂ ಸಹ, ಅವರು ಕೆಲವು ಸಾರಿ ಅರ್ಥಮಾಡಿಕೊಳ್ಳುವದರಲ್ಲಿ ನಿಧಾನವಾಗಿದ್ದರು (15:15, 16).

**ವಚನ 17.** ಹಳೆ ಒಡಂಬಡಿಕೆಯ **ಪ್ರವಾದಿಗಳು** ಅಸಂಖ್ಯಾತ ಮಹತ್ವದ ಭವಿಷ್ಯತ್ತಿನ ಸಂಗತಿಗಳನ್ನು ಪ್ರವಾದಿಸಿದ್ದಾರೆ, ಅವರು ಪ್ರವಾದಿಸಿದ ಎಲ್ಲವನ್ನೂ ಅವರು ತಿಳಿದುಕೊಂಡಿದ್ದರೋ ಇಲ್ಲವೋ ಎಂಬುದರಲ್ಲಿ ಸಂದೇಹವಿದೆ. ಉದಾಹರಣೆಗೆ, ದಾನಿಯೇಲನು ತನಗೆ ತೋರಿಸಿದ ಸಂಗತಿಗಳಿಗಾಗಿ ಭ್ರಮೆಹಿಡಿದವನಂತಾದನು (ದಾನಿಯೇಲ 9:1-27), ಆದುದರಿಂದ ಆತನು ದೇವರಿಗೆ ಪ್ರಾರ್ಥಿಸಿದನು. ದಾನಿಯೇಲನ ಪ್ರಾರ್ಥನೆಗೆ ಪ್ರತಿಕ್ರಿಯೆಯಾಗಿ, "ಜ್ಞಾನ ಬೋಧನೆ ಕೊಡುವದಕ್ಕಾಗಿ" ಗಬ್ರಿಯೇಲನನ್ನು ಅವನ ಬಳಿಗೆ ಕಳುಹಿಸಿದನು (ದಾನಿಯೇಲ 9:22). ಆ ಸಮಯದಲ್ಲಿ ಶಿಷ್ಯರು ಏನನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು **ನೋಡಲು** ಮತ್ತು **ಕೇಳಿಸಿಕೊಳ್ಳಲು** ಪ್ರವಾದಿಗಳು ಬಹಳ ಆಸೆಯುಳ್ಳವರಾಗಿದ್ದರು. ಪೇತ್ರನು ಹೀಗೆ ಬರೆದಿದ್ದಾನೆ,

> ದೇವರು ನಿಮಗೆ ತೋರಿಸಿರುವ ಕೃಪೆಯನ್ನು ಕುರಿತು ಮುಂತಿಳಿಸಿದ ಪ್ರವಾದಿಗಳು ಈ ರಕ್ಷಣೆಯ ವಿಷಯದಲ್ಲಿ ಸೂಕ್ಷ್ಮವಾಗಿ ವಿಚಾರಿಸಿ ಪರಿಶೋಧನೆಮಾಡಿದರು. ತಮ್ಮಲ್ಲಿದ್ದ ಕ್ರಿಸ್ತನ ಆತ್ಮನು ಕ್ರಿಸ್ತನಿಗೆ ಬರಬೇಕಾದ ಬಾಧೆಗಳನ್ನೂ ಅವುಗಳ ತರುವಾಯ ಉಂಟಾಗುವ ಪ್ರಭಾವವನ್ನೂ ಮುಂದಾಗಿ ತಿಳಿಸಿದಾಗ ಆತನು ಯಾವ ಕಾಲವನ್ನು ಇಲ್ಲವೆ ಎಂಥ ಕಾಲವನ್ನು ಸೂಚಿಸುವನೆಬುದನ್ನು ಅವರು ಪರಿಶೋಧನೆ ಮಾಡಿದರು. ಈ ಸಂಗತಿಗಳನ್ನು ಮುಂತಿಳಿಸುವದರಲ್ಲಿ ತಮಗೋಸ್ಕರವಲ್ಲ ನಿಮಗೋಸ್ಕರವೇ ಸೇವೆ ಮಾಡುವವರಾಗಿದ್ದಾರೆಂಬುದು ಅವರಿಗೆ ಪ್ರಕಟವಾಯಿತು. ಅವರು ಮುಂದಾಗಿ ಹೇಳಿದ ಸಂಗತಿಗಳೇ ಈಗ ಸಂಭವಿಸಿದವು ಎಂಬ ವರ್ತಮಾನವು ಪರಲೋಕದಿಂದ ಕಳುಹಿಸಲ್ಪಟ್ಟ ಪವಿತ್ರಾತ್ಮನ ಬಲದಿಂದ ನಿಮಗೆ ಸುವಾರ್ತೆಯನ್ನು ಸಾರಿದವರ ಮೂಲಕ ನಿಮಗೆ ಪ್ರಸಿದ್ಧಿಮಾಡಲ್ಪಟ್ಟಿದೆ. ದೇವದೂತರಿಗೂ ಈ ಸಂಗತಿಗಳನ್ನು ಲಕ್ಷವಿಟ್ಟು ನೋಡ ಬೇಕೆಂಬ ಅಪೇಕ್ಷೆ ಉಂಟು (1 ಪೇತ್ರ 1:10-12).

ಯೇಸುವಿನ ಸಾಮ್ಯಗಳು ಮತ್ತು ಇತರ ಬೋಧನೆಗಳ ಮೂಲಕ ಅಪೊಸ್ತಲರು ಪ್ರವಾದಿಗಳಿಗೆ ಪ್ರಕಟಿಸಲಾರದೇ ಇರುವ ಸತ್ಯಸಂಗತಿಗಳನ್ನು ಕಲಿತುಕೊಂಡರು. ಅಂತಿಮವಾಗಿ, ಸಭೆಯ ಸ್ಥಾಪನೆ ಮೂಲಕ "ನಾನಾ ವಿಧವಾದ ಜ್ಞಾನವು" ದೇವದೂತರಿಗೆ ಪ್ರಕಟಣೆಯಾಯಿತು (ಎಫೆಸ 3:8-12). ("ಪ್ರವಾದಿಗಳ" ಜೊತೆಯಾಗಿ **ಸತ್ಪುರುಷರೂ**, ನೋಡಿರಿ 10:41ರ ಮೇಲಿನ ವ್ಯಾಖ್ಯಾನ.)

## ಸಾಮ್ಯ - ಅದರ ವಿವರಣೆ (13:18-23)

**18ಬಿತ್ತುವವನ ವಿಷಯವಾದ ಸಾಮ್ಯದ ಅರ್ಥವನ್ನು ಕೇಳಿರಿ - 19ಯಾವನಾದರೂ ಪರಲೋಕ ರಾಜ್ಯದ ವಾಕ್ಯವನ್ನು ಕೇಳಿ ತಿಳುಕೊಳ್ಳದೆ ಇರುವಲ್ಲಿ ಸೈತಾನನು ಬಂದು ಆ ಮನುಷ್ಯನ ಮನಸ್ಸಿನಲ್ಲಿ ಬಿತ್ತಿದ್ದನ್ನು ತೆಗೆದುಹಾಕುತ್ತಾನೆ; ಈ ಮನುಷ್ಯನೇ ಬೀಜ ಬಿದ್ದ ದಾರೀ ಮಗ್ಗುಲಾಗಿರುವವನು. 20ಒಬ್ಬನು ವಾಕ್ಯವನ್ನು ಕೇಳಿದ ಕೂಡಲೆ ಸಂತೋಷದಿಂದ ಅದನ್ನು ಸ್ವೀಕರಿಸುತ್ತಾನೆ; 21ತನಗೆ ಬೇರಿಲ್ಲದ ಕಾರಣ ಇವನು ಸ್ವಲ್ಪ ಕಾಲ ಮಾತ್ರವೇ ಇದ್ದು ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡವಿ ಬೀಳುತ್ತಾನೆ; ಇವನೇ ಬೀಜ ಬಿದ್ದ ಬಂಡೆಯ ನೆಲವಾಗಿರುವವನು. 22ಒಬ್ಬನು ವಾಕ್ಯವನ್ನು ಕೇಳಿ ದಾಗ್ಯೂ ಪ್ರಪಂಚದ ಚಿಂತೆಯೂ ಐಶ್ವರ್ಯದಿಂದುಂಟಾಗುವ ಮೋಸವೂ ಆ ವಾಕ್ಯವನ್ನು ಅಡಗಿಸಿಬಿಡುವದರಿಂದ, ಫಲವನ್ನು ಕೊಡದೆ ಇರುತ್ತಾನೆ; ಇವನೇ ಮುಳ್ಳುಗಿಡಗಳಲ್ಲಿ ಬೀಜ ಬಿದ್ದ ನೆಲವಾಗಿರುವವನು. 23ಒಬ್ಬನು ವಾಕ್ಯವನ್ನು ಕೇಳಿ ತಿಳುಕೊಂಡು ಫಲವಂತನಾಗಿ ನೂರರಷ್ಟಾಗಲಿ ಅರವತ್ತರಷ್ಟಾಗಲಿ ಮೂವತ್ತರಷ್ಟಾಗಲಿ ಫಲವನ್ನು ಕೊಡುತ್ತಾನೆ; ಇವನೇ ಒಳ್ಳೆಯ ನೆಲವಾಗಿರುವವನು ಎಂದು ಹೇಳಿದನು.**

**ವಚನ 18.** ಯೇಸು ಒಬ್ಬನೇ ಇರುವಾಗ, **ಬಿತ್ತುವವನ ಸಾಮ್ಯದ** ಅರ್ಥವನ್ನು ವಿವರಿಸಿದ್ದಾನೆ (13:10ರ ಮೇಲಿನ ವ್ಯಾಖ್ಯಾನ ನೋಡಿರಿ). ಆತನು ಅವರಿಗೆ ಒತ್ತಾಯಪೂರ್ವಕವಾಗಿ ಕೇಳುವದಕ್ಕೆ ಕರೆ ನೀಡುತ್ತಾನೆ; ಸರಳವಾಗಿ **"ಕೇಳಿರಿ"** ಎನ್ನುವದಕ್ಕೆ ಬದಲಾಗಿ ಗ್ರೀಕ್ ಪಠ್ಯವು "ನೀವು ಕೇಳಿರಿ" ಎಂದು ಹೇಳುತ್ತದೆ. ಮುಕ್ತ ಮನಸ್ಸಿನಿಂದ ಅವರು ತಿಳಿದುಕೊಳ್ಳುವದಕ್ಕೆ ಶಕ್ತರಾಗುತ್ತಾರೆ.

ಈ ಸಾಮ್ಯದಲ್ಲಿ ಬಿತ್ತುವವನು ಯಾರು? ಅದಕ್ಕೆ ಮೊದಲನೆ ಉತ್ತರ "ಯೇಸು" ಈ ಅಧ್ಯಾಯದಲ್ಲಿ ಬರುವ ಹಣಜಿ ಸಾಮ್ಯಗಳಲ್ಲಿ ಇದನ್ನು ನಂತರದಲ್ಲಿ ಕಂಡುಕೊಳ್ಳುತ್ತೇವೆ, ಯೇಸು, "ಒಳ್ಳೆಯ ಬೀಜವನ್ನು ಬಿತ್ತುವವನೆಂದರೆ ಮನುಷ್ಯ ಕುಮಾರನು" ಎಂದು ಹೇಳಿದನು (13:37). ಅವನು ತಾನೇ ಪರಲೋಕರಾಜ್ಯದ ಪ್ರಾರಂಭದ ಬೀಜಗಳನ್ನು ಹರಡುತ್ತಾನೆ. ಆದಾಗ್ಯೂ, ಆತನು ತನ್ನ ಶಿಷ್ಯರನ್ನು ಮಿತಿಯಲ್ಲಿರುವ ನಿಯೋಗದೊಂದಿಗೆ ಕಳುಹಿಸುತ್ತಾನೆ ಕೊನೆಗೆ "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" (ಮಾರ್ಕ 16:15) ಎಂದು ಹೇಳಿದನು. ಆದುದರಿಂದ ಬಿತ್ತುವವನು, ಸಂದೇಶವನ್ನು ಪ್ರಸರಿಸುವ ಯಾವುದೇ ಶಿಷ್ಯನನ್ನು ಪ್ರತಿನಿಧಿಸುತ್ತಾನೆ.

ಈ ಸಾಮ್ಯದಲ್ಲಿ ಬೀಜವನ್ನು ಯಾವ ದೃಷ್ಟಿಕೋನದಲ್ಲಿ ಅವಲೋಕಿಸಲಾಗಿದೆ? ಮತ್ತಾಯನ ಪ್ರಕಾರ "(ಪರಲೋಕ ರಾಜ್ಯದ) ವಾಕ್ಯ" ವೆಂದು ಬರೆಯಲಾಗಿದೆ (13:19-23), ಲೂಕನ ಪ್ರಕಾರವಾಗಿ, "ಬೀಜವು ದೇವರ ವಾಕ್ಯ" ಎಂದು ಹೇಳಲಾಗಿದೆ (ಲೂಕ 8:11).

ಸಾಮ್ಯದಲ್ಲಿ ಮಣ್ಣಿನ ಅಂಶವು ಮುಖ್ಯವಾದ ಸಂಗತಿಯಾಗಿದೆ. ಅದು ಬೇರೆ ಬೇರೆ ಕೇಳುವ ಜನರನ್ನು ಅಥವಾ ಹೃದಯವನ್ನು ಸೂಚಿಸುತ್ತದೆ. ಇದನ್ನು "ಬಿತ್ತುವವನ ಸಾಮ್ಯವೆಂದು" ಕರೆದಿದ್ದರೂ ಸಹ, ನಿಜವಾಗಿಯು ಕಥೆ ಒತ್ತಿ ಹೇಳುವದು ಬೀಜವನ್ನು ಸ್ವೀಕರಿಸುವ ಮಣ್ಣಿನ ಕುರಿತಾಗಿ ಹೇಳಲಾಗಿದೆ. ವಾಕ್ಯವನ್ನು ಬಿತ್ತುವಾಗ ಅದನ್ನು ಬೇರೆ ಬೇರೆ ರೀತಿಯಲ್ಲಿ ಗ್ರಹಿಸಿಕೊಳ್ಳುವರು ಮತ್ತು ಅದರ ಫಲಿತಾಂಶವೇನೆಂದರೆ ಜನರು ಬೇರೆ ಬೇರೆ ರೀತಿಯಲ್ಲಿ ಪ್ರತಿಕ್ರಿಯಿಸುವರು.

**ವಚನ 19.** ಮೊದಲನೆಯದಾಗಿ, ಬೀಜವು **ದಾರಿಯ ಮಗ್ಗಲಲ್ಲಿ ಬಿದ್ದವು** (ನೋಡಿರಿ 13:4) ಸಿದ್ಧತೆಯಿಲ್ಲದ ಮತ್ತು ಬೇಧಿಸಲಾಸಧ್ಯವಾದ ಗಟ್ಟಿಯಾದ ಭೂಮಿ. ಬೀಜವು ಭೂಮಿಯ ಮೇಲಿನ ಭಾಗದಲ್ಲಿ ಬೀಳುವದರಿಂದ ಆಹಾರವನ್ನು ಹುಡುಕುತ್ತಿರುವ ಪಕ್ಷಿಗಳ ದೃಷ್ಟಿಗೆ ಸಂಪೂರ್ಣವಾಗಿ ಬೀಳುತ್ತದೆ ಮತ್ತು ಬೇಗನೆ ಕಬಳಿಸಲ್ಪಡುತ್ತದೆ. ಸಮಸ್ಯೆ ಬೀಜದಲ್ಲಿ ಇಲ್ಲ, ಬೀಜ ಉತ್ತಮವಾಗಿದೆ, ಆದರೆ ಅದು ಭೂಮಿಯಲ್ಲಿದೆ. **ವಾಕ್ಯವನ್ನು ಕೇಳಿ ಅದನ್ನು ಅರ್ಥಮಾಡಿಕೊಳ್ಳದೆ ಹೋಗುವವರು ಇವರನ್ನು ಇಂಥಹ ಮಣ್ಣಿಗೆ ಹೋಲಿಸುವರು.** ಪಕ್ಷಿಯಂತೆ ಈ ಜನರು ಅರ್ಥಮಾಡಿಕೊಳ್ಳುವದಿಲ್ಲ (13:4), ಸರ್ರನೆ ಬಂದು **ದುಷ್ಟನು ಕಿತ್ತುಕೊಂಡಂತೆ ಆ ಬೀಜವು ಅದು ಮೊಳಕೆ** ಹೊಡೆಯುವ ಮೊದಲೆ ಕಿತ್ತುಕೊಂಡು ಬಿಡುತ್ತದೆ.

"ದುಷ್ಟನು" ಎಂದು ಖಂಡಿತವಾಗಿ ಸೈತಾನನನ್ನು ಸೂಚಿಸುತ್ತದೆ. ಸತ್ಯವೇದದಿಂದ ಹೊರಗಿರುವ ಯೆಹೂದಿ ಬರಹಗಳಲ್ಲಿ ಆತನು ತೊಂದರೆಯನ್ನು ನೀಡುವ ಪಕ್ಷಿಗಳೊಂದಿಗೆ ಸಂಬಂಧವನ್ನು ಹೊಂದಿದ್ದಾನೆಂದು ಬರೆಯಲ್ಪಟ್ಟಿದೆ. ಒಂದು ಉದಾಹರಣೆಯಲ್ಲಿ, ಮಾನವ ಕುಲದ ಪೈರನ್ನು ಕದ್ದುಕೊಳ್ಳುವದಕ್ಕೆ ಆತನು "ಪಕ್ಷಿಗಳನ್ನು ಭೂಮಿಯಲ್ಲಿ ಬಿತ್ತಿದ ಬೀಜಗಳನ್ನು ತಿನ್ನುದಕ್ಕೆ ಕಳುಹಿಸಿದನು." "ಅವುಗಳನ್ನು ಉಳುವದಕ್ಕಿಂತ ಪೂರ್ವದಲ್ಲಿ, ಪಕ್ಷಿಗಳು ಬಂದು ಭೂಮಿಯ ಮೇಲಿನಿಂದ ಪಿಕ್ಕುಕೊಂಡು ಹೋದವು."[5]

ಸೈತಾನನಿಗೆ ಜನರ ಹೃದಯದಿಂದ ದೇವರ ವಾಕ್ಯವನ್ನು ಕಸಿದುಕೊಳ್ಳಲು ಅನೇಕ ಮಾರ್ಗಗಳಿವೆ. ಅನೇಕ ರೂಪಕಾಲಂಕಾರಗಳನ್ನು ಉಪಯೋಗಿಸಿ, "ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು

ಮಂಕುಮಾಡಿದನು" ಎಂದು ಪೌಲನು ಹೇಳಿದನು (2 ಕೊರಿಂಥ 4:4). ದೇವ ಜನರು ಸೈತಾನನ ವಿಧಾನದ ಕುರಿತು ಅಜ್ಞಾನಿಗಳಾಗಿರಬಾರದು (2 ಕೊರಿಂಥ 2:11; ಎಫೆಸ 4:27; 2 ತಿಮೋಥೆ 2:26; 1 ಪೇತ್ರ 5:8; 1 ಯೋಹಾನ 2:14-17).

**ವಚನಗಳು 20, 21.** ಎರಡನೆಯದಾಗಿ, ಯೇಸು **ಬೀಜವು ಬಂಡೆ ನೆಲದ ಮೇಲೆ ಬಿದ್ದಿರುವದನ್ನು** ವಿವರಿಸಿದ್ದಾನೆ (ನೋಡಿರಿ 13:5). ಸಂದೇಶವನ್ನು **ತಕ್ಷಣವೇ ಸಂತೋಷದಿಂದ** ಸ್ವೀಕರಿಸುವ ಮನುಷ್ಯನನ್ನು ಈ ನೆಲ ಚಿತ್ರಿಸುತ್ತದೆ. ಆದಾಗ್ಯೂ ಸಹ, ಬೀಜವು ಬೇಗನೆ ಸತ್ತು ಹೋಗುತ್ತದೆ ಯಾಕೆಂದರೆ, **ವೇದನೆಗಳು ಮತ್ತು ಹಿಂಸೆಗಳು** ಬರುವಾಗ ಈ ರೀತಿಯ ವ್ಯಕ್ತಿ **ಬಿದ್ದು ಹೋಗುತ್ತಾರೆ.** "ಬಿದ್ದು ಹೋಗುತ್ತಾರೆ" ಎನ್ನುವ ಬದಲಾಗಿ "ಅವರಿಗೆ ಸಹಿಸಿಕೊಳ್ಳುವ ಶಕ್ತಿ ಇಲ್ಲ" ವೆಂದು REB ಹೇಳುತ್ತದೆ. ಲೂಕ 8:13ರಲ್ಲಿ, "ಸ್ವಲ್ಪ ಸಮಯದವರೆಗೆ ನಂಬುತ್ತಾನೆ" ಎಂದು ಹೇಳುತ್ತದೆ. ಇಂತಹ ಶೋತೃವಿಗೆ ಇರುವ ಮುಖ್ಯ ಸಮಸ್ಯೆ ಎಂದರೆ ಆಳವಾದ ಗ್ರಹಿಕೆ ಇಲ್ಲದಿರುವದಾಗಿದೆ. **ಬೇರಿಲ್ಲದ ಕಾರಣ** ಅವನು ಬೇಗನೇ ವಿಶ್ವಾಸಭ್ರಷ್ಟನಾಗುತ್ತಾನೆ. ಶೋಧನೆ ಅಥವಾ ಹಿಂಸೆಯ ಮೊದಲನೆ ಲಕ್ಷಣ ಇದು ಸುಡುಬಿಸಿಲನ್ನು ಪ್ರತಿನಿಧಿಸುತ್ತದೆ (13:6), ಅವನು ಒಣಗಿ ಹೋಗುತ್ತಾನೆ. R.T. France ರವರು, "ಇದು ನಿಧಾನವಾಗಿ ಆಸಕ್ತಿಯನ್ನು ಕಳೆದು ಕೊಳ್ಳುವದಿಲ್ಲ, ಆದರೆ ಒತ್ತಡದಿಂದಾಗಿ ಬಿದ್ದು ಹೋಗುವದು" ಎಂದು ಹೇಳುತ್ತಾರೆ.[6]

**ವಚನ 22.** ಮೂರನೆಯದಾಗಿ, **ಕೆಲವು ಬೀಜಗಳು ಮುಳ್ಳುಗಿಡಗಳಲ್ಲಿ ಬಿದ್ದವೆಂದು** ಯೇಸು ಹೇಳಿದ್ದಾನೆ (ನೋಡಿರಿ 13:7). ಈ ಭೂಮಿಯು ಯಾರು ದೇವರ ವಾಕ್ಯವನ್ನು ಕೇಳುತ್ತಾರೆ ಆದರೆ ಪ್ರಪಂಚದ **ಚಿಂತೆಯು ಐಶ್ವರ್ಯದಿಂದುಟಾಗುವ ಮೋಸವನ್ನು** ಅನುಮತಿಸುವದರಿಂದ ಉಸಿರುಕಟ್ಟಿಸಿಕೊಳ್ಳುತ್ತಾರೆ. ಇದರ ಪರಿಣಾಮವಾಗಿ ಅವರ ಆತ್ಮೀಕ ಜೀವಿತ ಫಲದಾಯಕವಾಗಿರುವದಿಲ್ಲ. ಲೂಕನ ಸುವಾರ್ತೆಯಲ್ಲಿ ಯೇಸು, ಇಂಥಹ ವ್ಯಕ್ತಿಗಳು "ಫಲವನ್ನು ಮಾಗಿಸುವದಿಲ್ಲ" ಎಂದು ಹೇಳಿದ್ದಾನೆ (ಲೂಕ 8:14). "ಪ್ರಪಂಚದ ಚಿಂತೆ" ಮತ್ತು "ಐಶ್ವರ್ಯದಿಂದಾಗುವ ಮೋಸ" ಎನ್ನುವ ಎರಡು ವಿಷಯಗಳನ್ನು ಪರ್ವತ ಪ್ರಪಂಗದಲ್ಲಿ ಯೇಸು ಚರ್ಚಿಸಿದ್ದಾನೆ (6:19-34). ಯೇಸುವಿನ ಹಿಂಬಾಲಕರು ಶಾಶ್ವತವಾದ ಸಂಗತಿಗಳನ್ನು ಹೊಂದಲು ಅಡತಡೆಯಾಗುವ ಈ ಜೀವಿತದ ತಾತ್ಕಾಲಿಕವಾದ ಸಂಗತಿಗಳನ್ನು ಅನುಮತಿಸಬಾರದು. ಜೀವಿತದ ಸಮಸ್ಯೆಗಳಿಂದ ತುಂಬಿಕೊಂಡಿರುವದು ಮತ್ತು ಐಶ್ವರ್ಯದ ಬೆನ್ನಟ್ಟಿ ಮನಸ್ಸನ್ನು ಬೇರೆ ವಿಚಾರಗಳಲ್ಲಿ ತೊಡಗಿಸುವದು ಸರಳ. ಐಶ್ವರ್ಯವು ಮೋಸಕ ಅದು ನೀಡುವದಕ್ಕಿಂತ ಹೆಚ್ಚಾದದ್ದನ್ನು ವಾಗ್ದಾನ ಮಾಡುತ್ತದೆ ಮತ್ತು ಜನರು ದೇವರನ್ನು ಮರೆಯುವಂತೆ ಮಾಡುತ್ತದೆ, ಇದು ಎಲ್ಲಾ ಎಲ್ಲಾ ಐಶ್ವರ್ಯದ ಮೂಲವಾಗಿದೆ (ಧರ್ಮೋಪದೇಶಕಾಂಡ 8:11-20; ಜ್ಞಾನೋಕ್ತಿ 30:7-9; ಪ್ರಸಂಗಿ 2:4-11; ಲೂಕ 12:13-34; 1 ತಿಮೊಥೆ 6:17-19; ಇಬ್ರಿಯ 13:5, 6).

**ವಚನ 23.** ನಾಲ್ಕನೆಯದಾಗಿ, **ಬೀಜವು ಒಳ್ಳೆಯ ನೆಲದಲ್ಲಿ ಬಿದ್ದವು** (ನೋಡಿರಿ 13:8), ಇದು ವ್ಯಕ್ತಿಯು **ದೇವರ ವಾಕ್ಯವನ್ನು ಕೇಳಿ ಅದನ್ನು ಅರ್ಥಮಾಡಿಕೊಂಡಿರುವದಕ್ಕೆ ಹೋಲಿಕೆಯಾಗಿದೆ.** ಯೇಸು ಈ ಜನರನ್ನು "ಸುಗುಣವುಳ್ಳವರು ಮತ್ತು ಒಳ್ಳೆಯ ಹೃದಯ ಹೊಂದಿದವರೆಂದು" ವರ್ಣಿಸುತ್ತಾನೆ (ಲೂಕ 8:15). ಈ ಕೇಳುಗರು ಕೇವಲ "ವಾಕ್ಯವನ್ನು" ಕೇಳುವವರಾಗಿರದೆ ಅದನ್ನು ಅರ್ಥಮಾಡಿಕೊಳ್ಳುವವರಾಗಿದ್ದಾರೆ, ಆದರೆ ಅವರು ತಮ್ಮ ಹೃದಯದಲ್ಲಿ ಬೇರೂರಲು ಅವಕಾಶ ಕೊಡುವವರಾಗಿದ್ದಾರೆ. ಅವರು ಆತ್ಮೀಕ ಆಳ ಮತ್ತು ಸ್ಥಿರತೆಯನ್ನು ಹೊಂದಿರುತ್ತಾರೆ. ಜೀವನದ ಸಮಸ್ಯೆಗಳಿಂದ ಅವರು ಬೀಳದೆ ಸ್ಥಿರವಾಗಿ ಇರುತ್ತಾರೆ. ಅವರ ಐಶ್ವರ್ಯದ ಆಕರ್ಷಣೆಯನ್ನು ತಡೆಗಟ್ಟುತ್ತಾರೆ. ಯಾಕೆಂದರೆ ಅವರು ನಿಜವಾದ ಐಶ್ವರ್ಯದ ಬೆಲೆಯನ್ನು ಅರಿತವರಾಗಿರುತ್ತಾರೆ (ನೋಡಿರಿ ಇಬ್ರಿಯ 11:24-26).

ನಂಬಿಗಸ್ಥರಾಗಿರುವ ಶೋತೃಗಳು ಸಹ **ಫಲವನ್ನು ಕೊಡುವರು.** ಆತ್ಮೀಕ

ಸಹನೆಯ ಅವಶ್ಯಕತೆಗೆ ಯೇಸು ಒತ್ತುನೀಡುತ್ತಾರೆ: ಇವರು "ವಾಕ್ಯವನ್ನು ಹೃದಯದಲ್ಲಿ ಇಟ್ಟುಕೊಂಡು ತಾಳ್ಮೆಯಿಂದ ಫಲವನ್ನು ಕೊಡುತ್ತಾರೆ" ಎಂದು ಬರೆಯಲ್ಪಟ್ಟಿದೆ (ಲೂಕ 8:15). ಬದಲಾಗುವ ಫಲಗಳು, **ನೂರರಷ್ಟು, ಕೆಲವು ಅರವತ್ತರಷ್ಟು, ಮತ್ತು ಕೆಲವು ಮೂವತ್ತರಷ್ಟು,** ಇದು ವಿಶ್ವಾಸಿಗಳ ಫಲದಾಯಕ ಸೇವೆಯನ್ನು ಪ್ರತಿಬಿಂಬಿಸುತ್ತದೆ. "ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನು ಮಾಡಲಾರಿರಿ" ಎಂದು ಯೇಸು ಹೇಳಿದನು (ಯೋಹಾನ 15:5). ಪೌಲನ ಸಾಮ್ಯ ಕ್ರೈಸ್ತರು ಕ್ರಿಸ್ತನೊಂದಿಗೆ ವಿವಾಹವಾಗಿದ್ದಾರೆ ಇದರಿಂದಾಗಿ ಅವರು "ದೇವರಿಗೆ ಫಲವನ್ನು ನೀಡಬಹುದು" ಎಂಬುದಾಗಿದೆ (ರೋಮಾಪುರ 7:4). ವಿವಾಹ ಸಂಬಂಧದ ಫಲ ಮಕ್ಕಳು. ಕ್ರಿಸ್ತನೊಂದಿಗೆ ವಿವಾಹವಾದವರು ದೇವರಿಗಾಗಿ ಮಕ್ಕಳನ್ನು ಉತ್ಪಾದಿಸಬೇಕು. ಕ್ರೈಸ್ತರ ಜೀವನದಲ್ಲಿ ಇತರ ಫಲಗಳನ್ನು ಸಹ ಉತ್ಪಾದಿಸಬಹುದು (ನೋಡಿರಿ ಗಲಾತ್ಯ 5:22, 23). ಹೊರಕ್ಕೆ ಬೀಸಾಡಲ್ಪಟ್ಟು ಕೊಂಬೆ ಒಣಗಿಹೋಗುವಂತೆ ಮತ್ತು ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುವಂತೆ, ಫಲಕೊಡದೆಯಿರುವವರನ್ನು ಹೊರಕ್ಕೆ ಹಾಕಲಾಗುವದು (ಯೋಹಾನ 15:6).

ಕ್ರೈಸ್ತರು ಬೀಜವನ್ನು ಬಿತ್ತುವವರಾಗಿರಬೇಕು ಮತ್ತು ಫಲಕೊಡಲು ಪ್ರಾರ್ಥನೆಮಾಡುವವರಾಗಿರಬೇಕು. ನಾವು ಬೀಜವನ್ನು ಬಿತ್ತಬೇಕು ಮತ್ತು ದೇವರು ತನ್ನ ಕಾರ್ಯವನ್ನು ಮಾಡುವವರೆಗೆ ತಾಳ್ಮೆಯಿಂದಿರಬೇಕು.

## ಪಾಠಗಳು

## ಪರಲೋಕ ರಾಜ್ಯದ ಬೀಜವನ್ನು ಬಿತ್ತುವದು (13:1-9, 18-23)

ಬಿತ್ತುವವನ ಸಾಮ್ಯದಲ್ಲಿ ಯೇಸು ಲೋಕಕ್ಕೆ ಆತನ ಶಿಷ್ಯರು ವಾಕ್ಯವನ್ನು ತೆಗೆದುಕೊಂಡು ಹೋಗುವ ವಿಧವನ್ನು ಒದಗಿಸುತ್ತಾನೆ. ಬೀಜಕ್ಕೆ ಏಕಾಗ್ರತೆ ಒಳ್ಳೆಯದು ಆದರೆ "ಪ್ರಸರಿಸುವದಕ್ಕಿಂತ" ಪರಿಣಾಮಕಾರಿಯಾದದ್ದೇನಲ್ಲ. ನಾವು ಧಾರಾಳವಾಗಿ ಬೀಜವನ್ನು ಬಿತ್ತುವುದಾದರೆ, ಸಾಕಷ್ಟು ಉತ್ತಮವಾದ ನೆಲದ ಮೇಲೆ ಅಥವಾ ನಂಬಿಗಸ್ತ ಹೃದಯದ ಮೇಲೆ ಬೀಳುತ್ತವೆ ಮತ್ತು ಕರ್ತನಿಗಾಗಿ ಬಹಳಷ್ಟು ಫಲವನ್ನು ಹೊಂದುತ್ತೇವೆ. ನಾವು ನೆಟ್ಟು, ನೀರುಣಿಸಿದ್ದರೆ ಫಲಕ್ಕೆ ನಾವು ಜವಾಬ್ದಾರರಲ್ಲ. ಪೌಲನು "ನಾನು ಸಸಿಯನ್ನು ನೆಟ್ಟಿಸಿ ಅಪೊಸ್ತಲನು ನೀರು ಹೋಯಿದನು, ಆದರೆ ಬೆಳೆಸುತ್ತಾ ಬಂದವನು ದೇವರು" (1 ಕೊರಿಂಥ 3:6). "ಹಾಗೆಯೇ ನನ್ನ ಬಾಯಿಂದ ಹೊರಟ ಮಾತು ... ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂತಿರುಗುವದಿಲ್ಲ" (ಯೆಶಾಯ 55:11) ಎಂದು ದೇವರು ವಾಗ್ದಾನ ಮಾಡಿದ್ದಾನೆ.

ಬಿತ್ತುವ ಮತ್ತು ಕೊಯ್ಯುವದರ ದೇವರ ನಿಯಮ ಹೀಗೆ ಹೇಳುತ್ತದೆ, ಪ್ರತಿಯೊಂದು ವಿಧದ ಬೀಜವು ತನ್ನದೇ ಆದ ವಿಧವನ್ನು ಉತ್ಪಾದಿಸುತ್ತದೆ (ಆದಿಕಾಂಡ 1:11, 12). ನಾವು ವಿಶಿಷ್ಟವಾದ ವಿಧದ ಬೀಜವನ್ನು ಬಿತ್ತಿದಾಗ, ಅದರಿಂದ ನಿರ್ದಿಷ್ಟವಾದ ಫಲವನ್ನು ಹೊಂದುತ್ತೇವೆ ಎಂಬುದು ನಮಗೆ ತಿಳಿದದೆ. ದೈಹಿಕ ಕ್ಷೇತ್ರದಲ್ಲಿ ಯಾವುದು ಸತ್ಯವೋ ಅದು ಆತ್ಮೀಕ ಕ್ಷೇತ್ರದಲ್ಲೂ ಸತ್ಯವಾಗಿದೆ (ನೋಡಿರಿ ಗಲಾತ್ಯ 6:7-9). ಆತ್ಮೀಕ ಬೀಜ ಬಿತ್ತುವಾಗ, ನಾವು ಆತ್ಮೀಕ ಫಲಗಳನ್ನು ಹೊಂದುತ್ತೇವೆ. ದೇವರ ವಾಕ್ಯವೆಂಬ ಪರಿಶುದ್ಧವಾದ ಬೀಜವು ಬಿತ್ತುವಾಗ, ಅದು ಕ್ರೈಸ್ತರನ್ನು ಮಾತ್ರ ಮತ್ತು ಕೇವಲ ಕ್ರೈಸ್ತರನ್ನು ಮಾತ್ರ ಉತ್ಪಾದಿಸುತ್ತದೆ.

ಅದಕ್ಕಾಗಿ ಯೇಸು ಪರಿಣಾಮಕಾರಿಯಾಗಿ ಹೇಳಿದ್ದಾನೆ, "ಹೊರಟು ಹೋಗಿರಿ, ದೀಕ್ಷಾಸ್ನಾನ ಮಾಡಿಸಿರಿ, ಮತ್ತು ಅವರಿಗೆ ಹೆಚ್ಚಾಗಿ ಉಪದೇಶಿಸಿರಿ" ಎಂಬುದಾಗಿ ಹೇಳಿದ್ದಾನೆ (ಮತ್ತಾಯ 28:18-20). ನಾವು ಇತರರ ಆಳವಾಗಿ ಪ್ರಯತ್ನಿಸುವ ಜವಾಬ್ದಾರರಲ್ಲ, ಆದರೆ

ನಾವು ಬೀಜವನ್ನು ಹಾಕುವದಕ್ಕೆ ಪ್ರಯತ್ನಿಸುವ ಜವಾಬ್ದಾರಿ ನಮ್ಮದಾಗಿದೆ. ಯೇಸು ಅದನ್ನು ಮಾಡಿದನು (7:29; ಮಾರ್ಕ 1:27), ಮತ್ತು ಪೌಲನು ಇದನ್ನು ಮಾಡಲು ಆಜ್ಞಾಪಿಸಿರುತ್ತಾನೆ (1 ತಿಮೊಥೆ 4:16; 2 ತಿಮೊಥೆ 3:16).

## ವಿಧವಿಧ ಬಗೆಯ ನೆಲ (13:1-9, 18-23)

ಯೇಸುವಿನ ಸಾಮ್ಯದಲ್ಲಿ ಹೇಳಿದಂತೆ, ಸುವಾರ್ತೆಯೆಂಬ ಬೀಜವು ಬೇರೆ ಬೇರೆ ನೆಲದ ಮೇಲೆ ಬೀಳುತ್ತವೆ. ನೆಲವು ಬೇರೆಬೇರೆ ಜನರನ್ನು ಮತ್ತು ಅವರು ದೇವರ ವಾಕ್ಯವನ್ನು ಸ್ವೀಕರಿಸುವ ಪ್ರಮಾಣವನ್ನು ಪ್ರತಿನಿಧಿಸುತ್ತದೆ.

*ಗಟ್ಟಿ ನೆಲ (ದಾರಿ).* ಸುವಾರ್ತೆಯ ಬೀಜವು ಕೆಲವು ಜನರ ಕಠಿಣವಾದ ಹೃದಯಗಳನ್ನು ಬೇಧಿಸಲು ಸಾಧ್ಯವಿಲ್ಲ. ಅವರು ದೇವರ ಪರಿಶುದ್ಧತೆಯನ್ನು, ತಮ್ಮ ಪಾಪದ ನೈಜತೆಯನ್ನು ಮತ್ತು ಅದರ ಪರಿಣಾಮಗಳನ್ನು, ಕ್ರಿಸ್ತನ ಬಲಿದಾನದ ಅವಶ್ಯಕತೆಯನ್ನು ಮತ್ತು ಬರಲಿಕ್ಕಿರುವ ನ್ಯಾಯತೀರ್ಪು ಖಚಿತ ಎಂಬುದನ್ನು ಅರ್ಥಮಾಡಿಕೊಳ್ಳುವದಿಲ್ಲ. ಆದುದರಿಂದ ಸುವಾರ್ತೆ ಅವರಿಗೆ ಯಾವುದೇ ರೀತಿಯ ಲಾಭವನ್ನು ನೀಡುವದಿಲ್ಲ.

*ಬಂಡೆಯ ನೆಲ.* ಇತರ ಜನರು ತಕ್ಷಣ ಸುವಾರ್ತೆಯನ್ನು ಬೀಜವನ್ನು ಅತೀ ಆನಂದದಿಂದ ಸ್ವೀಕರಿಸುತ್ತಾರೆ; ಆದರೆ ವಿರೋಧಗಳು ಬರುವಾಗ ಅವರು ಬೇಗನೇ ಬಾಡಿ ಹೋಗುತ್ತಾರೆ ಮತ್ತು ಆತ್ಮೀಕವಾಗಿ ಸಾಯುತ್ತಾರೆ. ಅವರು ಕ್ರಿಸ್ತನನ್ನು ತೊರೆದು ಲೋಕಕ್ಕೆ ಹಿಂತಿರುಗುತ್ತಾರೆ.

*ಮುಳ್ಳು ಗಿಡಗಳ ನೆಲ.* ಸುವಾರ್ತೆಯ ಸಂದೇಶವನ್ನು ಸ್ವೀಕರಿಸಿದ ಜನರು ತಮ್ಮ ಆತ್ಮೀಕ ಫಲಗಳನ್ನು ಜೀವಿತದಲ್ಲಿ ಬರುವ "ಮುಳ್ಳು" ಗಳಿಂದಾಗಿ ಹಿಸುಕಿಹಾಕಬಹುದು. ಇಂದು ಅನೇಕ ಈ ವರ್ಗಕ್ಕೆ ಅರ್ಹರಾಗುತ್ತಾರೆ. ಅವರ ಜೀವಿತಗಳು ಜೀವನೋಪಾಯಕ್ರಮ ಮತ್ತು ಸ್ವಂತ ಆಸಕ್ತಿಗಳಿಂದ ತುಂಬಿರುತ್ತದೆ. ಅವರಿಗೆ ಆತ್ಮೀಕ ಬೆಳವಣಿಗೆಗಾಗಿ ಸಮಯವಿರುವದಿಲ್ಲ. ಪ್ರಾರ್ಥನೆ, ಸತ್ಯವೇದ ಅಧ್ಯಯನ, ದೇವಾಲಯದ ಹಾಜರಾತಿ, ಬೆಟ್ಟಿ, ವ್ಯಯಕ್ತಿಕ ಸುವಾರ್ತಾ ಸೇವೆ ಮತ್ತು ಇತರರ ಸೇವೆ ಮಾಡುವದು ಇಂತಹ ಚಟುವಟಿಕೆಗಳಿಂದ ತುಂಬಿ ಅವರನ್ನು ಹಿಂಡಿಬಿಡುತ್ತದೆ. ಇದರ ಪರಿಣಾಮವಾಗಿ, ಅವರು ಕರ್ತನಿಗೆ ಸ್ವಲ್ಪ ಫಲವನ್ನು ನೀಡುತ್ತಾರೆ.

*ಒಳ್ಳೆ ನೆಲ.* ದೇವರೆಡೆಗೆ ಮೃದುವಾದ ಮನಸ್ಸನ್ನು ಹೊಂದಿದವರು ಸಂತೋಷ ದಿಂದ ಸುವಾರ್ತೆಯನ್ನು ಸ್ವೀಕರಿಸುತ್ತಾರೆ. ಪ್ರಾಮಾಣಿಕತೆಯಿಂದ ಆತ್ಮೀಕ ಶಿಸ್ತಿಗೆ ಒಳಪಡಿಸಿಕೊಳ್ಳುತ್ತಾರೆ, ಅವರು ಬಲವಾದ ಕ್ರೈಸ್ತ ಬೇರುಗಳನ್ನು ಹೊಂದಿಕೊಳ್ಳುತ್ತಾರೆ ಅವು ಅವರಿಗೆ ಉತ್ತಮವಾಗಿ ಬೆಳೆಯಲು ಸಹಾಯ ಮಾಡುತ್ತವೆ. ಇದರ ಪರಿಣಾಮವಾಗಿ ಅವರು ಕರ್ತನಿಗಾಗಿ ಬಹಳ ಫಲವನ್ನು ನೀಡುತ್ತಾರೆ.

*ಮುಕ್ತಾಯ.* ಪ್ರತಿಯೊಬ್ಬ ವ್ಯಕ್ತಿ ತಮ್ಮನ್ನು ತಾವು, "ನಾನು ಯಾವ ರೀತಿಯ ನೆಲ ಆಗಿದ್ದೇನೆ?"; "ದೇವರ ರಾಜ್ಯದಲ್ಲಿ ಹೆಚ್ಚಿನ ಫಲಕೊಡಲು ನಾನು ಯಾವ ರೀತಿಯಲ್ಲಿ ಬದಲಾಯಿಸಿಕೊಳ್ಳುವ ಅವಶ್ಯಕತೆ ಇದೆ?" ಎಂದು ಕೇಳಿಕೊಳ್ಳಬೇಕು.

David Stewart

---

ಟಿಪ್ಪಣಿಗಳು

[1]Michael J. Wilkins, "Matthew," in *Zondervan Illustrated Bible Backgrounds Commentary,* vol. 1, *Matthew*, *Mark*, *Luke*, ed. Clinton E. Arnold (Grand Rapids, Mich.:

Zondervan, 2002), 82. [2]Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 377. [3]ಕೆಪರ್ನೌಮಿನ ಫಲವತ್ತತೆಯನ್ನು ಜೋಸಿಫಸ್‌ನು ಹೊಗಳಿದನು. (Josephus *Wars* 3.10.8.) [4]*Sibylline Oracles* 3.263–64; *Jubilees* 24.15. [5]*Jubilees* 11.10, 11; ನೋಡಿರಿ Talmud *Sanhedrin* 107a. [6]R. T. France, *The Gospel According to Matthew,* The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 219.